ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	70
ಮಾನ್ಯ ಸದಸ್ಯರ ಹೆಸರು	:	ಶ್ರೀಮತಿ ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	7-12-2020
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಸರ್ಕಾರಿ ಆಸ್ಪತ್ರೆಯ ಹೆಚ್ಚುವರಿ ಕಟ್ಟಡವನ್ನು ನಿರ್ಮಿಸಲು ಎಷ್ಟು ಅನುದಾನವನ್ನು ಮಂಜೂರು ಮಾಡಲಾಗಿದೆ;	ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ 450 ಹಾಸಿಗೆಯ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಲು ಸರ್ಕಾರದ ಆದೇಶದ ಸಂಖ್ಯೆ: ಆಕುಕ 105 ಎಂಪಿಎಸ್ 2019, ಬೆಂಗಳೂರು ದಿನಾಂಕ:06.11.2019 ರಲ್ಲಿ ಅಂದಾಜು ಮೊತ್ತ ರೂ.100.00 ಕೋಟಿಗಳಿಗೆ ಲೆಕ್ಕ ಶೀರ್ಷಿಕೆ: 4210-03-105-1-10-386 ನಿರ್ಮಾಣ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
ಆ	ಸದರಿ ಕಟ್ಟಡ ಕಾಮಗಾರಿಗೆ ಹಣ ಬಿಡುಗಡೆ ಮಾಡಲಾಗಿದೆಯೇ; ಬಿಡುಗಡೆಯಾಗಿದ್ದಲ್ಲಿ, ಇದುವರೆಗೂ ಎಷ್ಟು ಹಣ ಬಿಡುಗಡೆಯಾಗಿದೆ;	ಸದರಿ ಕಟ್ಟಡ ಕಾಮಗಾರಿಗೆ ಇದುವರೆಗೂ ರೂ.9.59 ಕೋಟಿ ಪ್ರಾರಂಭಿಕ ಹಣ ಬಿಡುಗಡೆ ಮಾಡಲಾಗಿದೆ.
ಇ	ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; ಹಾಗೂ ಯಾವ ಕಾಲಮಿತಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಿ, ಲೋಕಾರ್ಪಣೆಗೊಳಿಸಲಾಗುವುದು?	ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ ಹೊಸ ಆಸ್ಪತ್ರೆ ಕಟ್ಟಡ ನಿರ್ಮಿಸುವ ಉದ್ದೇಶಿತ ಜಾಗದಲ್ಲಿ ಹಳೆ ಕಟ್ಟಡಗಳಿದ್ದು, ಸದರಿ ಕಟ್ಟಡಗಳನ್ನು ನೆಲಸಮ ಮಾಡಿ ಅವಶೇಷಗಳನ್ನು ತೆರವುಗೊಳಿಸಿ ಹೊಸ ಕಟ್ಟಡ ಕಾಮಗಾರಿಯನ್ನು ನಿರ್ವಹಿಸಬೇಕಾಗಿದ್ದು, ಅದರಂತೆ, ಹಳೆ ಕಟ್ಟಡಗಳನ್ನು ತೆರವುಗೊಳಿಸಿ ವಿಲೇವಾರಿ ಮಾಡಲಾಗಿರುತ್ತದೆ ಹಾಗೂ ಜಾಗವನ್ನು ಸಮತಟ್ಟು ಮಾಡಲಾಗಿರುತ್ತದೆ ಹಾಗೂ ಪ್ರಸ್ತುತ ಹಂತದಲ್ಲಿ ಸದರಿ ಕಟ್ಟಡ ಕಾಮಗಾರಿಯ ಪಾಯಗಳಿಗೆ ಮಣ್ಣು ಅಗೆತ ಮತ್ತು ಕಾಂಕ್ರೀಟ್ ಕಾಮಗಾರಿ

		ಪ್ರಗತಿಯಲ್ಲಿರುತದೆ. ಸದರಿ ಕಾಮಗಾರಿಯನ್ನು ಕೈಗೊಂಡು ಮುಕ್ತಾಯಗೊಳಿಸಲು ಗುತ್ತಿಗೆ ಕರಾರಿನಲ್ಲಿ (ದಿನಾಂಕ:29.01.2020 ರಿಂದ 28.01.2022ರ ವರಗೆ) 24 ತಿಂಗಳು ಕಾಲಾವಧಿಯನ್ನು ನಿಗದಿಪಡಿಸಲಾಗಿರುತ್ತದೆ. ಹೊಸ ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸಲು ಪ್ರಾರಂಭಿಕ ಹಂತದಲ್ಲಿ ಅನಿರೀಕ್ಷಿತವಾಗಿ ಎದುರಾದ ಆರೋಗ್ಯ ತುರ್ತು ಪರಿಸ್ಥಿತಿಗೆ ಕಾರಣವಾದಂತಹ ಕೊರೋನಾ ವೈರಾಣುವಿನಿಂದಾಗಿ ಹಾಗೂ ಈ ತುರ್ತು ಪರಿಸ್ಥಿತಿಯನ್ನು ಎದುರಿಸಲು ರಾಜ್ಯ ಸರ್ಕಾರವು ವಿಧಿಸಿದ ನಿರ್ಬಂಧದ ಆದೇಶಗಳಿಂದಾಗಿ (ಲಾಕ್‌ಡೌನ್) ಕಾಮಗಾರಿಯ ಪ್ರಾರಂಭಿಕ ಹಂತದಲ್ಲಿ ಹಿನ್ನಡೆಯಾಗಿರುತ್ತದೆ ಹಾಗೂ ತದನಂತರದಲ್ಲಿ ಮಡಿಕೇರಿ ಜಿಲ್ಲೆಯಲ್ಲಿ ಸುರಿದಂತ ಭಾರಿ ಮಳೆಯಿಂದಾಗಿ ಮಾನ್ಯ ಜಿಲ್ಲಾಡಳಿತವು ಮರಳು ವಾಹನ ಹಾಗೂ ಭಾರಿ ವಾಹನಗಳ ಸಾಗಣೆಗೆ ನಿಷೇಧ ಏರಿದ ಹಿನ್ನಲೆಯಲ್ಲಿ ಕಾಮಗಾರಿಯ ಪ್ರಾರಂಭಕ್ಕೆ ಮತ್ತಷ್ಟು ಹಿನ್ನಡೆಯಾಗಿರುತ್ತದೆ. ಈ ಎಲ್ಲಾ ಪರಿಸ್ಥಿತಿಯಿಂದಾಗಿ ಕಾಮಗಾರಿಯು ಸ್ಥಗಿತಗೊಂಡಿದ್ದು, ಈಗಷ್ಟೇ ಪ್ರಾರಂಭಿಸಲಾಗಿದ್ದು, ನಿಗಧಿತ ಗುತ್ತಿಗೆ ಕಾಲಾವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜಿಸಿದೆ.

ಆಕುಕ 138 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು